## ಕರ್ನಾಟಕ ವಿಧಾನ ಪರಿಷತ್ತು

### ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ದಿನೇಶ್ ಗೂಳಿಗೌಡ ಮತ್ತು ಶ್ರೀ ಮರಿತಿಬ್ಬೇಗೌಡ ರವರ ಮಂಡಿಸಿರುವ ಗಮನ ಸೆಳೆಯುವ ಸೂಚನೆ

**ಸೂಚನೆ:**

ಮಂಡ್ಯ ಜಿಲ್ಲೆಯಲ್ಲಿನ ಹಾಲು ಉತ್ಪಾದಕರಿಗೆ ಸರ್ಕಾರ ಪ್ರತಿ ಲೀಟರ್‌ಗೆ ನೀಡುತ್ತಿರುವ ರೂ.5/- ಗಳ ಪ್ರೋತ್ಸಾಹ ಧನವನ್ನು ಕಳೆದ ಆರು ತಿಂಗಳುಗಳಿಂದ ಬಿಡುಗಡೆಗೊಳಿಸದೆ ಇರುವುದರಿಂದ ಹಾಲು ಉತ್ಪಾದಕರು ತುಂಬಾ ಸಂಕಷ್ಟಗೊಳಗಾಗಿರುವ ಗಂಭೀರ ಸಮಸ್ಯೆ ಕುರಿತು.

**ಹೇಳಿಕೆ:**

ಕರ್ನಾಟಕ ರಾಜ್ಯ ಸರ್ಕಾರವು ಹಾಲು ಉತ್ಪಾದಕರಿಗೆ ಪ್ರತಿ ಲೀಟರ್ ಗುಣಮಟ್ಟದ ಹಾಲಿಗೆ ರೂ.5.00 ಪ್ರೋತ್ಸಾಹ ಧನವನ್ನು ಡಿ.ಬಿ.ಟಿ. ಮುಖೇನ ನೇರವಾಗಿ ಹಾಲು ಉತ್ಪಾದಕರ ಆಧಾರ್ ಜೋಡಣೆ ಬ್ಯಾಂಕ್ ಖಾತೆಗಳಿಗೆ ಪಾವತಿಸಲಾಗುತ್ತಿದೆ.

ಮಂಡ್ಯ ಜಿಲ್ಲೆಯ ವ್ಯಾಪ್ತಿಯಲ್ಲಿನ ಹಾಲು ಉತ್ಪಾದಕರಿಗೆ ಪ್ರಸಕ್ತ ಸಾಲಿನಲ್ಲಿ ಆಗಸ್ಟ್-2022ರ ಮಾಹೆಯವರೆವಿಗೆ ಎಲ್ಲಾ ವರ್ಗದ ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನದ ಒಟ್ಟು ಮೊತ್ತ ರೂ.68.47 ಕೋಟಿಗಳು ಸರ್ಕಾರದಿಂದ ಪಾವತಿಯಾಗಿರುತ್ತದೆ.

ಸೆಪ್ಟಂಬರ್ & ಅಕ್ಟೋಬರ್-22ರ ಮಾಹೆಗಳ ವರೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪ್ರೋತ್ಸಾಹಧನದ ಒಟ್ಟು ಮೊತ್ತ ರೂ.50.20 ಲಕ್ಷಗಳು ಪಾವತಿಯಾಗಿರುತ್ತದೆ.

ಸೆಪ್ಟಂಬರ್ & ಅಕ್ಟೋಬರ್-22ರ ಮಾಹೆಗಳ ಸಾಮಾನ್ಯ ವರ್ಗದ ಮತ್ತು ನವೆಂಬರ್-2022ರ ಮಾಹೆಯ ಎಲ್ಲಾ ವರ್ಗದ ಹಾಲು ಉತ್ಪಾದಕರುಗಳಿಗೆ ಒಟ್ಟು ಮೊತ್ತ ರೂ.36.55 ಕೋಟಿಗಳಿಗೆ ಒಕ್ಕೂಟದಿಂದ ಪ್ರೋತ್ಸಾಹಧನದ ಬಿಲ್ಲು ಸಲ್ಲಿಕೆಯಾಗಿದ್ದು, (ಇ-ಸೈನ್ ದತ್ತಾಂಶ) ಸರ್ಕಾರದಿಂದ ಅನುದಾನ ಬಿಡುಗಡೆಗೊಳಿಸಲಾಗಿದ್ದು, ಪ್ರೋತ್ಸಾಹ ಧನವನ್ನು ಡಿ.ಬಿ.ಟಿ. ಮುಖೇನ ನೇರವಾಗಿ ಹಾಲು ಉತ್ಪಾದಕರ ಆಧಾರ್ ಜೋಡಣೆ ಬ್ಯಾಂಕ್ ಖಾತೆಗಳಿಗೆ ಪಾವತಿಸಲು ಕ್ರಮವಹಿಸಲಾಗುತ್ತಿದೆ.

**ಪಸಂಮೀ 322 ಸಲೆವಿ 2022**

**(ಪ್ರಭು.ಬಿ.ಚವ್ಹಾಣ್)**
**ಪಶುಸಂಗೋಪನಾ ಸಚಿವರು**